ಎದುರಿಗೆ ಬಂದುಬಿಡುತ್ತದೆ. ನನಗೂ ಹಾಗೆಯೇ ಆಯಿತು. ಮೊದಲು ಕೆಲವು ಶಾಲೆಗಳಲ್ಲಿ ಪಾಠ ಮಾಡಿದೆ. ನಂತರ 'ಆದ್ಯಂತ' ಅಂತ ಒಂದು ರಂಗತಂಡ ಕಟ್ಟಿ ಅದರಲ್ಲಿ ಒಂದಿಷ್ಟು ಪ್ರಯೋಗ ಮಾಡಿದೆ. ಜೀವನಕ್ಕೆ ಏನಾದ್ರೂ ಬೇಕಲ್ಲ, ಆಗ 'ಬೆಂಗಳೂರು ಫಿಲ್ಮ್ ಇನ್‌ಸ್ಟಿಟ್ಯೂಟ್'ನಲ್ಲಿ ನಟನೆಯ ಪಾಠ ಮಾಡಿ ಎಂದು ಕರೆದರು. ವಾರದಲ್ಲಿ ಐದು ದಿನ ಪಾಠ ಮಾಡುವುದಕ್ಕೆ ಶುರುಮಾಡಿದೆ. ಸಿನಿಮಾ ಬಗ್ಗೆ ಆಸಕ್ತಿ ಹುಟ್ಟಿದ್ದು ಅಲ್ಲಿಯೇ. ಸಿನಿಮಾಗೋಸ್ಕರ ನಟನೆ ಕಲಿಯುವವರಿಗೆ ಯಾವ ರೀತಿ ಹೇಳಿಕೊಡಬೇಕು ಎಂದು ಯೋಚಿಸತೊಡಗಿದೆ. ಅಲ್ಲಿ ಸಿಗುತ್ತಿದ್ದ ದುಡ್ಡಿನಲ್ಲಿ ಬಹುಪಾಲನ್ನು ಸಿನಿಮಾ ನೋಡುವುದಕ್ಕೆಂತೇ ಖರ್ಚು ಮಾಡುತ್ತಿದ್ದೆ. ನ್ಯಾಷನಲ್ ಮಾರ್ಕೆಟ್‌ನಲ್ಲಿನ ಒಂದು ಅಂಗಡಿಯಲ್ಲಿ ವಿಶ್ವದ ಎಲ್ಲ ಅತ್ಯುತ್ತಮ ಸಿನಿಮಾಗಳ ಡಿವಿಡಿಗಳು ಸಿಗುತ್ತಿದ್ದವು. ತಿಂಗಳಲ್ಲಿ ಒಂದು ದಿನ ಅಲ್ಲಿಗೆ ಹೋಗಿ ನಲತ್ತೈವತ್ತು ಡಿವಿಡಿ ತೆಗೆದುಕೊಂಡು ಬಂದು ನೋಡುತ್ತಿದ್ದೆ. ನಾನು ವಿಶ್ವ ಸಿನಿಮಾಗಳನ್ನು ನೋಡಿದ್ದೆಲ್ಲ ಹೀಗೆಯೇ. ಈಗೊಂದು ಎರಡು ವರ್ಷಗಳಿಂದ ಫಿಲ್ಮ್ ಫೆಸ್ಟಿವಲ್‌ಗಳಿಗೆ ಹೋಗುತ್ತಿದ್ದೇನಷ್ಟೆ.

◆ ನಾನು ಸಿನಿಮಾ ನಿರ್ದೇಶಕನಾಗಬಲ್ಲೆ ಎಂದು ನಿಮಗೆ ಅನಿಸಿದ್ದು ಯಾವಾಗ?

ನಾನು ಸಿನಿಮಾದಲ್ಲಿ ಸಂಪೂರ್ಣ ತೊಡಗಿಕೊಂಡಿದ್ದು ಜಯತೀರ್ಥ ಅವರ 'ಒಲವೇ ಮಂದಾರ'ದ ಮೂಲಕ. ಅದು ಅವರ ಮೊದಲ ಸಿನಿಮಾ. ನನಗೂ ಮೊದಲ ಪ್ರಯತ್ನ. ಒಟ್ಟಿಗೇ ಸ್ಕ್ರಿಪ್ಟ್ ಕೆಲಸ ಮಾಡಿದೆವು. ಒಂದು ವರ್ಷನ್ ಸ್ಕ್ರೀನ್ ಪ್ಲೇ ಬರೆದೆ. ಆ ಚಿತ್ರದ ಸಿನಿಮಾ ನಟರಿಗೆ ತರಬೇತಿ ನೀಡಿದೆ. ಚಿತ್ರೀಕರಣದಲ್ಲಿಯೂ ಭಾಗವಹಿಸಿದೆ. ಆಗೆಲ್ಲ ನಾನು ಸಿನಿಮಾ ಮಾಡಬೇಕು ಎಂಬ ಕಲ್ಪನೆಯೂ ಇರಲಿಲ್ಲ. ಜಯತೀರ್ಥ ಸಿನಿಮಾ ಮಾಡ್ತಿದ್ದಾರೆ, ಅವರು ಗೆಲ್ಲಬೇಕು ಎಂಬುದಷ್ಟೇ ಮನಸಲ್ಲಿ ಇದ್ದಿದ್ದು.

ನಂತರ ಮಲ್ಲಾಡಿಹಳ್ಳಿಯಲ್ಲಿ ಒಂದು ನಾಟಕ ಮಾಡುತ್ತಿದ್ದಾಗ ವಿವೇಕ ಶಾನಭಾಗ ಅವರ 'ನಿರ್ವಾಣ' ಕಥೆ ಓದಿದೆ. ಅದನ್ನು ಒಂದು ಕಿರುಚಿತ್ರ ಮಾಡಬಹುದಲ್ವಾ ಅನಿಸಿತು. ಅವರಿಗೆ ಹೇಳಿಯೂ ಹೇಳಿದೆ. ಅವರು 'ಕಿರುಚಿತ್ರ ಯಾಕೆ? ಸ್ವಲ್ಪ ಸಮಯ ತೆಗೆದುಕೊಂಡು ಪೂರ್ಣ ಪ್ರಮಾಣದ ಚಿತ್ರ ಮಾಡು' ಎಂದರು. ನನಗೂ ಹೌದು ಅನ್ನಿಸಿ ಸುಮ್ಮನಾದೆ. ನನ್ನ ರಂಗಸ್ನೇಹಿತರು ಕಿರುಚಿತ್ರ ಮಾಡೋಣ ಎಂದು ಒತ್ತಾಯಿಸುತ್ತಿದ್ದರು. ಒಂದಿಷ್ಟು ತಂತ್ರಜ್ಞರೂ ಸಹಾಯಕ್ಕೆ ಬಂದರು. 'ನಿರ್ವಾಣ' ಕಿರುಚಿತ್ರ ಮಾಡಿದೆ. ಅದು ಚೆನ್ನಾಗಿ ಬಂತು. ಬೆಂಗಳೂರು ಕಿರುಚಿತ್ರೋತ್ಸವದಲ್ಲಿ ದ್ವಿತೀಯ ಅತ್ಯುತ್ತಮ ಕಿರುಚಿತ್ರ ಎಂಬ ಮನ್ನಣೆ ಗಳಿಸಿತು. ಆಗ ನಾನೂ ಏನೋ ಮಾಡಬಹುದು ಎಂದು ಸಣ್ಣ ಕಾನ್ಫಿಡೆನ್ಸ್ ಬಂತು. ನಂತರ ನೀನಾಸಮ್‌ನ 'ಕಾವ್ಯ ಕನ್ನಡಿ' ಎಂಬ ಪೊಯೆಟ್ರಿ ಫಿಲ್ಮ್ ಮಾಡಿದೆ. ಅದಾದ ಮೇಲೆ ನಂಗೆ ಸಿನಿಮಾ ನಿರ್ದೇಶನ ಮಾಡುವ ಧೈರ್ಯ ಬಂದಿದ್ದು.

ಈ ನಡುವೆ ಹಲವು ಸಿನಿಮಾಗಳಿಗೆ ಡೈಲಾಗ್, ಕಥೆ, ನಟನೆಗಳಿಗೆ ಸಂಬಂಧಿಸಿದಂತ ಸಲಹೆ ಸೂಚನೆ ಕೊಡುತ್ತಿದ್ದೆ. ನಾನೇ ಯಾಕೆ ಒಂದು ಸಿನಿಮಾ ಮಾಡಬಾರದು ಎಂದು ಅನಿಸಿತು. ಅಷ್ಟರಲ್ಲಾಗಲೇ ಎಚ್.ಬಿ. ಇಂದ್ರಕುಮಾರ್ ಅವರ ಕಥೆ ಓದಿ ಇದನ್ನು ಸಿನಿಮಾ ಮಾಡಬೇಕು ಎಂದು ಅನಿಸಿತ್ತು. ಅವರ ಬಳಿ ಹೇಳಿಯೂ ಇದ್ದೆ. ಮೊದಲು ಗುರು ದೇಶಪಾಂಡೆ ಈ ಚಿತ್ರವನ್ನು ನಿರ್ಮಾಣ ಮಾಡುವುದಾಗಿ ಒಪ್ಪಿಕೊಂಡಿದ್ದರು. ಕೊನೆಗೆ ಕೆಲವು ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಸಚೀಂದ್ರನಾಥ ನಾಯಕ್ ಮತ್ತು ಅಭಿಜಿತ್ ಕೋಟೆಕಾರ್ ಚಿತ್ರ ನಿರ್ಮಾಣಕ್ಕೆ ಮುಂದೆ ಬಂದರು. 'ಸೂಜಿದಾರ' ಹೀಗೆ ರೂಪುಗೊಂಡಿತು.

◆ 'ಸೂಜಿದಾರ'ದ ವಿಶೇಷತೆಗಳೇನು?

ಒಂದೇ ಮಾತಲ್ಲಿ ಹೇಳಬೇಕೆಂದರೆ ಇದು ಅಪ್ಪಟ ಕನ್ನಡ ಸಿನಿಮಾ. ಇಂದು ಕನ್ನಡದಲ್ಲಿ ಬರುತ್ತಿರುವ ಯಾವುದೇ ಸಿನಿಮಾ ಚಿತ್ರಮಂದಿರಕ್ಕೆ ಹೋಗಿ ನೋಡಿದರೂ ಹಾಡು, ಫೈಟ್, ದೃಶ್ಯಸಂಯೋಜನೆ ಹೀಗೆ ಯಾವುದಾದರೂ ಒಂದು ವಿಭಾಗದಲ್ಲಿ ರೆಫರೆನ್ಸುಗಳು ಕಾಣಿಸುತ್ತವೆ. ಆದರೆ ನಮ್ಮ ಸಿನಿಮಾದಲ್ಲಿ ಆ ಥರದ ಯಾವ ರೆಫರೆನ್ಸೂ ಕಾಣುವುದಿಲ್ಲ. ಸ್ಕ್ರೀನ್ ಪ್ಲೇ, ಅಭಿನಯ, ದೃಶ್ಯಸಂಯೋಜನೆ, ಸಂಭಾಷಣೆ, ಹಾಡುಗಳು ಈ ಎಲ್ಲವುಗಳನ್ನೂ ಯಾವ ರೆಫರೆನ್ಸುಗಳೂ ಇಲ್ಲದೆಯೇ ಮಾಡಿರುವುದು. ಈ ನಿಟ್ಟಿನಲ್ಲಿ ಅಪ್ಪಟವಾದ ಕನ್ನಡ ಸಂವೇದನೆಯ ಸಿನಿಮಾ 'ಸೂಜಿದಾರ'.

◆ ಇದು ಯಾವ ಪ್ರಕಾರದ ಸಿನಿಮಾ?

'ಸೂಜಿದಾರ'ದ ಜಾನರ್ ಯಾವುದು ಎಂಬ ಕುರಿತು ನಮಗೇ ಸ್ವಲ್ಪ ಗೊಂದಲ ಇದೆ. ಇದೊಂದು ಫ್ಯಾಮಿಲಿ ಡ್ರಾಮಾ ಎನ್ನಬಹುದು, ರೊಮ್ಯಾಂಟಿಕ್ ಥ್ರಿಲ್ಲರ್ ಅನ್ನಬಹುದು... ಸಸ್ಪೆನ್ಸ್ ಇದೆ, ಕಾಮಿಡಿ ಇದೆ, ಐರನಿ ಇದೆ, ಸರ್ಕ್ಯಾಸಮ್ ಇದೆ, ಪಾಲಿಟಿಕಲ್ ವಿಷಯಗಳೂ ಇವೆ, ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳಿವೆ... ಹಾಗಂತ ಎಲ್ಲ ತುರುಕಿ ಸಾಕ್ಷ್ಯಚಿತ್ರ ಮಾಡಿದ್ದೀನಿ ಅಂತಲ್ಲ. ಮುಖ್ಯಕಥನದ ಸುತ್ತಲು ಅವೆಲ್ಲವೂ ತುಂಬ ಸಹಜವಾಗಿ ಹೆಣೆದುಕೊಂಡಿವೆ.

ಸಮುದ್ರಕ್ಕೆ ಫ್ಯಾಮಿಲಿ ಟ್ರಿಪ್‌ಗೆ ಹೋದಾಗ ದಡದಲ್ಲಿ ಈಜಾಡಿಕೊಂಡು ಎಂಜಾಯ್ ಮಾಡಿಕೊಂಡು ಬರಬಹುದು. ಬೋಟ್ ತೆಗೆದುಕೊಂಡು ಮಧ್ಯಕ್ಕೆ ಹೋದರೆ ಸಮುದ್ರದ ಬೇರೆ ಭಾಗ ನೋಡಬಹುದು. ಸ್ಕೂಬಾ ಡೈವ್ ಮಾಡಿ ನೀರಿನ ಆಳಕ್ಕೆ ಇಳಿದರೆ ಸಮುದ್ರದೊಳಗಿನ ಬೇರೆ ಬೇರೆ ಆಯಾಮಗಳೆಲ್ಲ ಕಾಣಲು ಶುರುವಾಗುತ್ತವೆ. ಈ ಸಿನಿಮಾವೂ ಹಾಗೆಯೇ ಇದೆ. ■



'ಸೂಜಿದಾರ' ಚಿತ್ರದಲ್ಲಿ ನಟಿ ಹರಿಪ್ರಿಯಾ